## ಕೂದಲನ್ನು ಮಲಗಿಸಬೇಡ!

ಮೂರು ವರ್ಷದ ಮೊಮ್ಮಗ ಅರ್ಜುನ ಈಗಿನ್ನೂ ಕಲಿಯುತ್ತಿರುವ ಮುದ್ದು ಮಾತುಗಳಿಂದ ನಮ್ಮನ್ನು ರಂಜಿಸುವ ತುಂಟ. ಅವನಿಗೆ ತಲೆ ಸ್ನಾನ ಎಂದರೆ ಬೇಸರ, ಅಲರ್ಜಿ! ಮೊನ್ನೆ ಭಾನುವಾರ ನನ್ನ ಸೊಸೆ ಅವನಿಗೆ ಸ್ನಾನ ಮಾಡಿಸುವಾಗ ತಲೆಯ ಮೇಲೆ ನೀರು ಸುರಿಯುತ್ತಲೇ, 'ಅಮ್ಮಾ , ನನ್ನ ಕೂದಲನ್ನು ಮಲಗಿಸಬೇಡ, ಎದ್ದುಕೂಡಿಸು' ಎಂದು ರಚ್ಚೆಹಿಡಿದ. ಏನೆಂದು ಅರಿಯದೇ ಅವಳನ್ನು ವಿಚಾರಿಸಲು, 'ನೀರು ಸುರಿಯುತ್ತಲೇ ಕೂದಲು ತಲೆಗೆ ಮೆತ್ತಿ ಕೊಳ್ಳೋದನ್ನು ಮಲಗಿಸಬೇಡ' ಎಂಬರ್ಥದಲ್ಲಿ ಹೇಳಿದ್ದಳು. ಇದನ್ನರಿತು ಮನೆಯವರೆಲ್ಲಾ ಅವನ ವಿಭಿನ್ನ ವಿಚಾರಣೆಗೆ ನಕ್ಕೆವು. ಹಟ ಮರೆತು ತಾನೂ ನಗುವಿನಲ್ಲಿ ಭಾಗಿಯಾದ ಆ ತುಂಟ!

**ಸ್ಮಿತಾ ಜೋಶಿ**





## ನಿನ್ನನ್ನು ಬಿಟ್ಟು ಹೋಗ್ತೇವೆ

ಅಕ್ಕನ ಮಗಳು ಹೆರಿಗೆಗಾಗಿ ಅಕ್ಕನ ಮನೆಗೆ ತನ್ನ ನಾಲ್ಕು ವರ್ಷದ ಮಗಳನ್ನು ಕರೆದುಕೊಂಡು ಬಂದಿದ್ದಳು. ನಾನೂ ಅಕ್ಕನ ಸಹಾಯಕ್ಕಾಗಿ ಅವರ ಮನೆಗೆ ಹೋಗಿದ್ದೆ. ಹೆರಿಗೆಗೆ ಇನ್ನೂ ಒಂದು ತಿಂಗಳು ಬಾಕಿ ಇತ್ತು. ಅಂದು ಸಂಜೆ ಅಕ್ಕನ ಮಗಳನ್ನು ತಪಾಸಣೆಗಾಗಿ ನರ್ಸಿಂಗ್ ಹೋಂಗೆ ಕರೆದುಕೊಂಡು ಹೋಗಬೇಕಾಗಿತ್ತು. ಎಲ್ಲರೂ ಹೊರಡಲು ತಯಾರಿ ನಡೆಸಿದ್ದೆವು. ನಾವು ಮೂರು ಜನ ರೆಡಿಯಾದರೂ, ಅಕ್ಕನ ಮಗಳು ಇನ್ನೂ ರೆಡಿಯಾಗಿರಲಿಲ್ಲ.

ಅವಳಿಗಾಗಿ ಕಾಯುತ್ತಾ ಕುಳಿತುಕೊಂಡಿದ್ದೆವು. ಆಗ ಅಕ್ಕನ ಮಗಳ ಮಗಳು 'ಅಮ್ಮಾ, ನೀನು ಬೇಗ ಬರ್ತೀಯೋ? ಇಲ್ಲವೋ? ನೀನು ಬೇಗ ಬರದಿದ್ದರೆ ನಿನ್ನನ್ನು ಬಿಟ್ಟು ಹೋಗುತ್ತೇವೆ ನೋಡು' ಎಂದಳು. ನಮಗೆಲ್ಲರಿಗೂ ಜೋರಾಗಿ ನಗು ಬಂತು.

**ಸು. ವಿಜಯಲಕ್ಷ್ಮಿ**